ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 2560/2022

ಪಿ ಡಬ್ಲುಃ 04

ಸಿ ಡಬ್ಲುಃ 05

| | |
|---|---|
| ಸಾಕ್ಷಿದಾರರ ಹೆಸರು | ಉದಯ ಹರಿಕಂತ್ರ |
| ತಂದೆಯ ಹೆಸರು | ಸೂಲು ಹರಿಕಂತ್ರ |
| ವಯಸ್ಸು | 48 |
| ಉದ್ಯೋಗ | ಎಚ್ ಸಿ ಹೊನ್ನಾವರ ಠಾಣೆ |
| ವಾಸ್ತವ್ಯ | ಹೊನ್ನಾವರ |

ಸಾಕ್ಷಿಯನ್ನು ದಿನಾಂಕಃ 19-12-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು 2019 ರಿಂದ ಹೊನ್ನಾವರ ಪೋಲಿಸ್ ಠಾಣೆಯಲ್ಲಿ ಎಚ್ ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 12.01.2022 ರಂದು ನಾನು ಮತ್ತು ಚಾಸಾ 4, ಚಾಸಾ 6 ರವರು ಚಾಸಾ 1 ರವರೊಂದಿಗೆ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ 1 ರವರಿಗೆ ಯಾರೋ ಬಾತ್ಮಿದಾರರು ಹೊಸಾಡು ಬ್ರಿಡ್ಜ ಹತ್ತಿರ ಯಾರೋ ಒಬ್ಬ ವ್ಯಕ್ತಿ ಓಸಿ ಮಟ್ಕಾ ಆಡಿಸುತ್ತಿದ್ದಾನೆ ಎಂದು ದೂರವಾಣಿ ಮೂಲಕ ಮಾಹಿತಿ ನೀಡಿದ್ದು ಸದ್ರಿ ವಿಚಾರವನ್ನು ಚಾಸಾ 1 ರವರು ನಮಗೆ ತಿಳಿಸಿದ ಮೇರೆಗೆ ನಾವು ಚಾಸಾ 1 ರವರ ಜೊತೆ 11.20 ರ ಸಮಯಕ್ಕೆ ನಮ್ಮ ಇಲಾಖಾ ವಾಹನದಲ್ಲಿ ಹೊಸಾಡು ಚರ್ಚ ಕ್ರಾಸ್ ಹತ್ತಿರ ತಲುಪಿ ಅಲ್ಲಿ ಚಾಸಾ 4 ರವರ ಮೂಲಕ ಪಂಚರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿ ಅವರ ಒಪ್ಪಿಗೆ ಪಡೆದು ಚರ್ಚ ಕ್ರಾಸ್ ಹತ್ತಿರ ನಿಂತು ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಹೊಸಾಡು ಬ್ರಿಡ್ಜ ಹತ್ತಿರ 1 ರೂಗೆ 80 ರೂ ಕೊಡುವುದಾಗಿ ಕೂಗಿ ಹೇಳಿ ಜನರನ್ನು ಕರೆಯುತ್ತಿದ್ದ. ಅದನ್ನು ನೋಡಿ ಆತ ಓಸಿ ಮಟ್ಕಾ ಆಡಿಸುತ್ತಿದ್ದಾನೆ ಎಂದು ಖಚಿತಪಡಿಸಿಕೊಂಡು ದಾಳಿ ಮಾಡಿ ಓಸಿ ಮಟ್ಕಾ ಆಡಿಸುತ್ತಿದ್ದ ವ್ಯಕ್ತಿಯನ್ನು ಚಾಸಾ 1 ರವರು ಹಿಡಿದಿರುತ್ತಾರೆ. ಆಡಲು ಬಂದವರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಿದರೂ ಅವರು ಸಿಕ್ಕಿರುವುದಿಲ್ಲ. ನಂತರ ಚಾಸಾ 1 ರವರು ಅವನ ಹೆಸರನ್ನು ಕೇಳಿದಾಗ ಆತ ಮಂಜುನಾಥ ಬಡ್ಕಾ ಗೌಡ ಎಂದು ಹೇಳಿರುತ್ತಾನೆ. ಅವನ ಅಂಗ ಜಪ್ತಿ ಮಾಡಲಾಗಿ ಅವನಿಂದ ಒಂದು ಪೆನ್ನು, ಓಸಿ ಚೀಟಿ ಮತ್ತು 2000/- ರೂ ನಗದು ಸಿಕ್ಕಿರುತ್ತದೆ. ಸದ್ರಿ ಹಣ ಓಸಿ ಹಣ ಎಂದು ತಿಳಿಸಿರುತ್ತಾನೆ. ಸದ್ರಿ ಹಣ ಚೀಟಿ ಯಾರಿಗೆ ಕೊಡುತ್ತೀಯಾ ಎಂದಾಗ ಆತ ಗಣಪತಿ ನಾರಾಯಣ ಗೌಡನಿಗೆ ಕೊಡುವುದಾಗಿ ಹೇಳಿರುತ್ತಾನೆ. ಸ್ಥಳದಲ್ಲಿ ಮುದ್ದೆಮಾಲನ್ನು ವಶಕ್ಕೆ ಪಡೆದು ಬೆಳಿಗ್ಗೆ 11.30 ರಿಂದ 12.10 ರವರೆಗೆ ನಿಪಿ 1 ರಂತೆ ಪಂಚನಾಮೆ ಜರುಗಿಸಿರುತ್ತೇವೆ. ನಂತರ ಈ ಕುರಿತು ಚಾಸಾ 1 ರವರು ಠಾಣಾಧಿಕಾರಿಯ ಮುಂದೆ ದೂರು ನೀಡಿದ್ದು ನಾನು ಚಾಸಾ 7 ರವರ ಮುಂದೆ ಈ ಕುರಿತು ಹೇಳಿಕೆ ನೀಡಿರುತ್ತೇನೆ. ವಶಪಡಿಸಿಕೊಂಡ

ಮುದ್ದೆಮಾಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಎಂ ಒ 1 ರಿಂದ 3 ನ್ನು ನೋಡಿ ಗುರುತಿಸುತ್ತಾರೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಆರ್. ಎಮ್. ಬಿ. ವಕೀಲರಿಂದಃ</u>**

ನಾವು ಗೇರುಸೊಪ್ಪ ಸರ್ಕಲ್ ಹತ್ತಿರ ಇದ್ದಾಗ ಚಾಸಾ 1 ರವರಿಗೆ ಬಾತ್ಮಿ ಬಂದಿರುತ್ತದೆ. ನಾವು ಗೇರುಸೊಪ್ಪ ಮಾರ್ಗವಾಗಿ ಹೊಸಾಡು ಗ್ರಾಮದ ಹತ್ತಿರ ಹೋಗಿರುತ್ತೇವೆ. ನಾವು 11.20 ಕ್ಕೆ ಬಿಟ್ಟಿದ್ದು ಸ್ಥಳಕ್ಕೆ ಹೋಗಲು 15 ನಿಮಿಷ ಬೇಕಾಯಿತು. 1 ನೇ ಆರೋಪಿ ನಿಂತ ಜಾಗದಿಂದ ನಾವು ಸುಮಾರು 50 ಮೀ ದೂರದಲ್ಲಿ ಮರೆಯಲ್ಲಿ ನಿಂತು ನೋಡಿರುತ್ತೇವೆ. ಸದ್ರಿ ದಿನ ನಾವು ಇಲಾಖಾ ವಾಹನದಲ್ಲಿ ಹೋಗಿರುತ್ತೇವೆ. ನಾವು ವಾಹನವನ್ನು ಚರ್ಚ ಕ್ರಾಸ್ ಹತ್ತಿರ ನಿಲ್ಲಿಸಿರುತ್ತೇವೆ. ನಾವು 5-10 ನಿಮಿಷ ವೀಕ್ಷಣೆ ಮಾಡಿರುತ್ತೇವೆ. ಚಾಸಾ 4 ರವರು ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ಅವರನ್ನು ಚರ್ಚ ಕ್ರಾಸ್ ಹತ್ತಿರ ಬರಮಾಡಿಕೊಂಡಿರುತ್ತೇವೆ. ಚಾಸಾ 2 ಮತ್ತು ಚಾಸಾ 3 ರವರು ಅನೇಕ ಪ್ರಕರಣದಲ್ಲಿ ಪಂಚರಾಗಿರುತ್ತಾರೆ ಎಂದರೆ ಸರಿಯಲ್ಲ.

ನಾವು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ 5-6 ಜನರು ಆಟ ಆಡುತ್ತಿದ್ದರು. ಅವರು 1 ನೇ ಆರೋಪಿಗೆ ಹಣ ಕೊಡುತ್ತಿದ್ದರು. ಅವರು ಎಷ್ಟು ಹಣ ಕೊಟ್ಟಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ. ಸದ್ರಿ ಬ್ರಿಡ್ಜ ಹತ್ತಿರ ಸುಮಾರು 2-3 ಮನೆಗಳಿವೆ. ಸದ್ರಿ ರಸ್ತೆಯ ಬಲಬದಿಗೆ ಅಂಗಡಿಗಳ ಸಾಲು ಇವೆ ಎಂದರೆ ಸರಿ. ನಾವು ಸ್ಥಳೀಯರನ್ನು ಪಂಚರಾಗಿ ಕರೆದಿರುವುದಿಲ್ಲ. ಅವರನ್ನು ಚಾಸಾ 1 ರವರು ಕೂಡಾ ಕರೆದಿರುವುದಿಲ್ಲ. ನಾವು ಸ್ಥಳದಲ್ಲಿ ಇದ್ದ ಹೊಟೆಲ್ ನವರನ್ನು ಕೂಡಾ ಪಂಚರಾಗಿ ಬರುವಂತೆ ಕರೆದಿರುವುದಿಲ್ಲ. ಸ್ಥಳದಲ್ಲಿ ಸೇರಿದ್ದ ಜನರು ಬೇರೆ ಬೇರೆ ದಿಕ್ಕಿಗೆ ಓಡಿಹೋಗಿರುತ್ತಾರೆ. ನಾವು 100 ಮೀ ನಷ್ಟು ಅವರನ್ನು ಬೆನ್ನಟ್ಟಿರುತ್ತೇವೆ. ನಾವು ನಮ್ಮ ಅಂಗ ಜಪ್ತಿಯನ್ನು ಪಂಚರಿಗೆ ನೀಡಿದ್ದೆವು. 1 ನೇ ಆರೋಪಿಯ ಸ್ವಖುಷಿ ಹೇಳಿಕೆಯನ್ನು ಪಡೆದಿರುತ್ತೇವೆ. ಹೊಟೆಲ್ ಹತ್ತಿರ ಒಂದು ಸಹಕಾರಿ ಸಂಘದ ಕಟ್ಟಡ ಮತ್ತು ಬ್ರಿಡ್ಜ ಇದೆ. ವಶಕ್ಕೆ ಪಡೆದ ಹಣದ ಮುಖಬೆಲೆ ನೆನಪಿಲ್ಲ. ಅದನ್ನು ಹೇಳಿಕೆಯಲ್ಲಿ ಕೂಡಾ ಬರೆಸಿರುವುದಿಲ್ಲ. ಎಂ ಒ 1 ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ವಶಪಡಿಸಿಕೊಂಡ ವಸ್ತುಗಳ ಮೇಲೆ ಪಂಚರ ಸಹಿ ಪಡೆದಿರುವುದಿಲ್ಲ. ಸದ್ರಿ ದಿನ ನಾವು ದಾಳಿ ಮಾಡಿದ್ದು ಇಲ್ಲ ಮತ್ತು ಯಾವದೇ ವಸ್ತುಗಳನ್ನು ವಶಕ್ಕೆ ಪಡೆದಿದ್ದು ಇಲ್ಲ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ಆದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಹೊನ್ನಾವರ.